## Government of Karnataka
## Deposition Sheet (R.P.N.57) Form 4 Criminal

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 33/2021 |

ದಿನಾಂಕ 09-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 5 ಪ್ರಾಸಾಃ 3

| | |
|---|---|
| ಹೆಸರು | ಸಂತೋಷ |
| ತಂದೆಯ ಹೆಸರು | ಚನ್ನಗಿರಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಮುಖ್ಯ ಪೋಲಿಸ್ ಪೇದೆ ನಂಬರ್ 118 ಮಸ್ಕಿ ಪೋಲಿಸ್ ಠಾಣೆ |
| ವಾಸಸ್ಥಳ | ಮಸ್ಕಿ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು 2012 ರಿಂದ 2020 ರವರೆಗೆ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ನಂತರ ಪದೋನ್ನತಿ ಹೊಂದಿ 2023 ರವರೆಗೆ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸಿದ್ದೇನೆ.

ಚಾಸಾ-1 ರವರು ದೇವದುರ್ಗ ತಹಶೀಲ್ದಾರರು ಆಗಿರುತ್ತಾರೆ. ದಿನಾಂಕ: 24-08-2020 ರಂದು ನಾನು ಪೋಲಿಸ್ ಠಾಣೆಯಲ್ಲಿ ಗಣಕ ಯಂತ್ರದಲ್ಲಿ ಪೋಲಿಸ್ ಐ ಟಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ಚಾಸಾ-6 ರವರು ಠಾಣಾ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದರು. ನನ್ನ ಹತ್ತಿರ ಬಂದು ಪಿ ಎಸ್ ಐ ರವರು ನನಗೆ ಪೋನ್ ಮಾಡಿ ದೇವದುರ್ಗದ ತಹಶೀಲ್ದಾರರಾದ ಚಾಸಾ-1 ರವರು ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು

ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ನೀನು ಹೋಗಿ ಸ್ಪೀಕರ್ ತೆಗೆದುಕೊಂಡು ಬಾ ಅಂತಾ ತಿಳಿಸಿದ್ದಾರೆ ಆದ ಕಾರಣ ನನ್ನ ಜೊತೆ ನೀನು ಬಾ ಅಂತಾ ತಿಳಿಸಿದ್ದರಿಂದ, ನಾನು ಅವರೊಂದಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೆನೆ. ಆ ಸಮಯದಲ್ಲಿ ಚಾಸಾ-1 ಮತ್ತು 7 ರವರು ಇದ್ದರು. ಆ ಸಮಯದಲ್ಲಿ ಅಲ್ಲಿ 1ನೇ ಆರೋಪಿ ಇದ್ದನು. ಇತನು ನನಗೆ ಚಾಸಾ-1 ರವರು ಹೊಸದಾಗಿ ಬಂದ ಪಿ ಎಸ್ ಐ ಅಂತಾ ಅಂದನು, ಆಗ ನಾನು ಹಾಗೂ ಚಾಸಾ-6 ರವರು ಸೇರಿಕೊಂಡು ಸ್ಪೀಕರ್ ಕೊಡಿ ಅಂತಾ ಕೇಳಿದಾಗ, ಚಾಸಾ-1 ರವರು ನಮಗೆ ತಿಳಿಸಿದ್ದಾರೆ ಎಂದು ನಾನು 1ನೇ ಆರೋಪಿಗೆ ಹೇಳಿದಾಗ, ನಿಮ್ಮ ಪಿ ಎಸ್ ಐ ರವರಿಗೆ ಫೋನ್ ಮಾಡಿ ಸ್ಪೀಕರ್ ತೆಗೆದುಕೊಂಡು ಹೋಗಲು ತಿಳಿಸಿದಾಗ, 1ನೇ ಆರೋಪಿ ಸ್ಪೀಕರ್ ತೆಗೆದುಕೊಂಡು ಹೋಗಲು ತಯಾರಾದಾಗ ನಾನು ಸ್ಪೀಕರ್ ಕೊಡಿ ಎಂದು ತೆಗೆದುಕೊಳ್ಳಲು ಹೋದಾಗ, 1ನೇ ಆರೋಪಿ ನನ್ನನ್ನು ತಳ್ಳಿ, ಸ್ಪೀಕರಗಳನ್ನು ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟನು ಅಂತಾ ತಿಳಿಸಿದರು. ನಂತರ ತಹಶೀಲ್ದಾರರಾದ ಚಾಸಾ-1 ರವರು ತಮ್ಮ ಸಿಬ್ಬಂದಿಯವರೊಂದಿಗೆ ಜೀಪನಲ್ಲಿ ಕುಳಿತುಕೊಂಡು ಹೋದರು. ನಂತರ ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟ 02 ಸ್ಪೀಕರ್ ಗಳನ್ನು ಸುತ್ತ ಮುತ್ತ ಹುಡುಕಲಾಗಿ ಜನೌಷಧಿ ಅಂಗಡಿ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ 02 ಸ್ಪೀಕರಗಳನ್ನು ಇಟ್ಟಿರುವುದನ್ನು ಒಂದು ಖಾಸಗಿ ಆಟೋದಲ್ಲಿ ಹಾಕಿಕೊಂಡು ಠಾಣೆ ಮುಂದೆ ಹಾಜರುಪಡಿಸಿರುತ್ತೇನೆ. ಸ್ಥಳದಲ್ಲಿ 1ನೇ ಆರೋಪಿಯೊಂದಿಗೆ 2ನೇ ಆರೋಪಿ ಇದ್ದನು ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇತ್ತು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅಲ್ಲದೆ ತಹಶೀಲ್ದಾರರ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಬಗ್ಗೆ ಚಾಸಾ-1

ರವರು ದೂರು ಕೊಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಮುದ್ದೆ ಮಾಲು ಸ್ಪೀಕರ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

1. ಚಾಸಾ-6 ರವರು ನನಗೆ ಮಾಹಿತಿ ತಿಳಿಸಿದಾಗ ಸಮಯ ಸಂಜೆ 7-45 ಗಂಟೆಯಾಗಿತ್ತು. ನಾನು ಮತ್ತು ಚಾಸಾ-6 ರವರು ಮೋಟಾರ್ ಸೈಕಲ್ ಮೇಲೆ ಹೋಗಿದ್ದು ಆ ಮೋಟಾರ್ ಸೈಕಲ್ ನೋಂದಣಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳವು ಯಾವ ವಾರ್ಡ್ ನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಅದು ಅಯ್ಯಪ್ಪ ದವಾಖಾನೆ ಎದುರುಗಡೆ ಇರುತ್ತದೆ. ನಾವು ಸ್ಥಳಕ್ಕೆ ಹೋದಾಗ ಸಮಯ 7-50 ರಿಂದ 7-55 ಗಂಟೆಯಾಗಿತ್ತು. ನಾವು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-1, 4, 7 ಮತ್ತು 8 ರವರು ಇದ್ದರು. ಇವರನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳ ಯಾರಿಗೆ ಸೇರಿದ್ದು ಎಂದು ನನಗೆ ನೆನಪಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಲು ಪರವಾನಿಗೆ ಪಡೆದುಕೊಂಡಿದ್ದರು. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಸ್ಪೀಕರ್ ಗಳು ಇರಲಿಲ್ಲ. ಸ್ಥಳದಲ್ಲಿ ಸ್ಪೀಕರ್ ಹಚ್ಚಿದ ಬಗ್ಗೆ ಪೋಟೋವಾಗಲಿ ವಿಡಿಯೋವಾಗಲಿ ನಾನು ನೋಡಿರುವುದಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾನೆಯಾದ ಸ್ಥಳದಲ್ಲಿ ಬೆಳಿಗ್ಗೆ ಮತ್ತು ಸಂಜೆ ಪೂಜೆ ಮಾಡುವ ಬಗ್ಗೆ ಮತ್ತು ಜನರ ದರ್ಶನ್ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದ ಸಮಯದಲ್ಲಿ ಯಾರು ಜನರು ಇರಲಿಲ್ಲ. ಸ್ಥಳದಿಂದ ಸ್ಪೀಕರಗಳನ್ನು ಯಾರು ತೆಗೆದುಕೊಂಡು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ಜನೌಷಧಿ ಅಂಗಡಿ ಮುಂದೆ 2 ಸ್ಪೀಕರಗಳು ಇದ್ದವು. ಅವುಗಳನ್ನು ನಾವೆ ಹುಡುಕಿರುತ್ತೇವೆ. ಸ್ಥಳದಿಂದ ಜನೌಷಧಿ ಕೇಂದ್ರ ಸುಮಾರು 100 ಮೀಟರನಷ್ಟು ದೂರು ಇರುತ್ತದೆ.

2. ನಾವು ಹೋದಾಗ ಚಾಸಾ-1 ರವರಿಗೆ ಆರೋಪಿತರು ತಳ್ಳಾಡಿ ಅವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ತಿಳಿಸಿರುತ್ತಾರೆ. ಜನೌಷಧಿ ಅಂಗಡಿಯ ಮುಂದೆ ಇದ್ದ ಸ್ಪೀಕರ್ ಗಳ ನಂಬರ್ ಮತ್ತು ಅವು ಯಾವ ಕಂಪನಿಯವು ಎಂದು ನನಗೆ ಹೇಳಲು ಬರುವುದಿಲ್ಲ. ಸ್ಪೀಕರ್ ಇದ್ದ ಸ್ಥಳದ ಫೋಟೋವನ್ನು ತೆಗೆದಿರುವುದಿಲ್ಲ. ಗಣೇಶ ವಿಗ್ರಹ ಪ್ರತಿಷ್ಠಾಪಿಸಿದ ಸ್ಥಳದ ಚಕ್ ಬಂದಿ ನನಗೆ ಹೇಳಲು ಬರುತ್ತದೆ. ಅಲ್ಲಿ ಖಾಲಿ ಜಾಗ ಇತ್ತು. ಉತ್ತರ ದಿಕ್ಕಿಗೆ ರಸ್ತೆ ಇರುತ್ತದೆ. ತಹಶೀಲ್ದಾರರವರು ಸ್ಪೀಕರಗಳನ್ನು ತೆಗೆದುಕೊಂಡು ಹೋಗಿ ಎಂದು ಪಿ ಎಸ್ ಐ ರವರಿಗೆ ಹೇಳಿದ ಮೇಲೆ ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಆದರೆ ಅವರನ್ನು ವಿಚಾರಣೆ ಮಾಡಿರುತ್ತೇನೆ. ಜನೌಷಧಿ ಅಂಗಡಿಯ ಮುಂದೆ ಸ್ಪೀಕರ್ ಗಳು ಸಿಕ್ಕಾಗ, ಚಾಸಾ-1 ರವರು ನಮಗೆ ಹೇಳಿ ಹೋಗಿರುತ್ತಾರೆ. ಸ್ಥಳದಲ್ಲಿ ಇರಲಿಲ್ಲ ನಮಗೆ ಹೇಳಿ ಹೋಗಿರುತ್ತಾರೆ. ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ ಲಾಕ್ ಡೌನ್ ಇತ್ತು ಎಂದು ನನಗೆ ಹೇಳಲು ಬರಲು ಬರುವುದಿಲ್ಲ. ನಮ್ಮ ಠಾಣೆಗೆ ಸಾರ್ವಜನಿಕರು ಸ್ಪೀಕರ್ ನಲ್ಲಿ ಧ್ವನಿ ಹೆಚ್ಚಾಗಿರುವ ಬಗ್ಗೆ ಯಾರು ದೂರು ಕೊಟ್ಟಿರುವುದಿಲ್ಲ. ಲಾಕ್ ಡೌನ್ ನಿಯಮವಾಳಿಗಳು ಪಾಲನೆ ಮಾಡಿರುವುದಿಲ್ಲ ಆರೋಪಿತರು ಮೌಖಿಕವಾಗಿ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದೇ ಸಿಟ್ಟನ್ನು ಇಟ್ಟುಕೊಂಡು ಚಾಸಾ-1 ರವರು ಆರೋಪಿತರ ವಿರುದ್ದ ಸುಳ್ಳು ದೂರು ಕೊಟ್ಟಿದ್ದಾರೆಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆಮಾಲಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ